Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 34] ಶುಕ್ರವಾರ 7—11—47 [ಬಿಡಿ ಪ್ರತಿ 3 ಪೈ

ಹಾ ! ಹಾ ! ಹೈದರಾಬಾದಿನಲ್ಲಿ

ಔರ್ವ ಮುಸ್ಲಿಂ ಸ್ತ್ರೀಗಾಗಿ

ಕುರಿಗ್ರಾಮ ಎಂಬಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಸ್ಥಾನವು ಸೇರಿತ್ತು. ಕೋರ್ಟಿನ ಅಧಿವೇಶನ ನಡೆಯುತ್ತಿರುವಾಗಲೇ ಅನಿರೀಕ್ಷಿತವಾಗಿ 12 ಜನ ಸಶಸ್ತ್ರ ತಂಡೆವೊಂದು ಅಲ್ಲಿಗೆ ಬಂದು, ಔರ್ವ ಮುಸ್ಲಿಂ ಸ್ತ್ರೀಯನ್ನು ಅಲ್ಲಿಂದ ಸೆಳೆದೊಯ್ಯಲು ಯತ್ನಿಸಿತು. ಆದೇ ಕೋರ್ಟಿಗೆ ೪ ಹೆಂಗುಸು ನೊಡನೆ, ಅವಳದೇ ಜಾತಿಯ ಇತರ ಅಪ್ಸರೂ ಬಂದಿದ್ದರು. ಆ ಸ್ತ್ರೀಗಾಗಿ ಇತ್ತಂಡದವರೊಳಗೆ ಖಾಡಾಖಾಡಿಯಾಗುವುದಿತ್ತು. ಎರಡು ಕಡೆಯವರೂ ಆಕೆ ತಮ್ಮ ಕಡೆಯ ಔರ್ವನ ಪತ್ನಿಯೆಂದು ಸಿದ್ಧಪಡಿಸಲು ಯತ್ನಿಸುತ್ತಿದ್ದರು. ಈ ಕಥೆಯು ' ಹಿಂದೂಸ್ತಾನ್ ಸ್ಟೆಂಡಾರ್ಡ್ ' ಪತ್ರಿಕೆಯಲ್ಲಿ ಪ್ರಕಟವಾಗಿದೆ

ಸಿಂಗರ ಅಗಮನ

ಕೇಂದ್ರ ಸರಕಾರದ ರಕ್ಷಣಾ ಮಂತ್ರಿ ಸರದಾರ ಬಲದೇವಸಿಂಗರೂ, ಡಾ || ಶಾಮ ಪ್ರಸಾದ ಮುಖರ್ಜಿಯವರೂ, ವೈಸಾಯ ಮಂತ್ರಿಗಳೊಡನೆ, ವೈಸಾರು ಡಾಕೋಟಾದಲ್ಲಿ 9 ನೇ ತಾ| ಸುಜೆ ವೇಳೆಗೆ ಬೆಂಗಳೂರಿಗೆ ಹಾರಿ ಬರುವರು.

ಶ್ರೀನಗರ

ಶ್ರೀನಗರ ನ 4 — ಶ್ರೀನಗರವು ಬಹು ಭದ್ರವಾದ ಕೊಟೆ ಕೊತ್ತಲಂತೆ ಮಾಡಲ್ಪಟ್ಟು ಸುತ್ತಲು ಕಾವಲು ಏರ್ಪಡಿಸಲಾಗಿದೆ

ಇಂದಿನವರೆಗೆ 1000 ಮಂದಿ ಹತರಾಗಿರುವರೆಂದೂ, ಆ ನವರದ ಸಿಟಿಗಾಲ್ ಮಂಡಿ ಮತ್ತು ಚಿಕಾಲ್‌ಗುಡ ಭೆಗಗಳು ಅಗ್ನಿಪ್ರಕಂಣಕ್ಕೆ ಪಹುತಿಯಾಗಿರುವೆಯೆಂತಿದ್ದು, ಆ ಅಗ್ನಿ ಜ್ವಾಲೆಯು ಹೈದರಾಬಾದು ರೈಲ್ವೇ ಸ್ಟೇಷನ್ನಿಗೆ ಕಾಣುತ್ತಿರುವುದೆಂದ ಪ್ರಕಟವಾಗಿದೆ.

ನವದೆಹಲಿ ನ 6 — ಶ್ರೀ ರೆಡ್ಡಿ, ಭಾಷ್ಯಂರವರು ಗಾಂಧೀಜಿಯವರೊಡನೆ ಸಂಭಾಷಣೆ ನಡೆಸಿದರು.

ಹೈದರ್ಬಾದಿನ ತಾಲಾ ಕಾಲೇಜು ಗಳ 15 ಸಾವಿರ ವಿದ್ಯಾರ್ಥಿಗಳು ಮುಷ್ಕರ ಹಿಡಿದಿದ್ದಾರೆ.

ನವದೆಹಲಿ ನ 5.... ಸ್ವತಂತ್ರ ಪಾಕಿಸ್ತಾನದ ಸರ್ಕಾರ ಕಾಬದಲಿನಲ್ಲಿ ಸ್ಥಾಪಿತವಾಗಿದೆ.

ಕೇಂದ್ರ ಸರಕಾರದ ಹಿಂದೂ ಮಹಾಸಭೆಯ ಮಂತ್ರಿ ಡಾ || ಶಾಮ ಪ್ರಸಾದ ಮುಖರ್ಜಿಯವರು ತಾ || ೧೦ ರಂದು ಮೈಸೂರು ಇಂಟರ್ಮಾಡಿಯೆಟ್ ಕಾಲೇಜು ಸಭಾಭವನದಲ್ಲಿ ಭಾಷಣ ಮಾಡುವರು.

ನಾಗಪುರ ನ 4— ಅಗಸ್ಟ್ ಗಲಭೆ ಸಂಬಂಧದಲ್ಲಿ ವಸೂಲ್ಮಾಡಿದ್ದ ಜುಲ್ಮಾನೆಗದನ್ನು ವಾಪಸ್ಸು ಕೊಡಲು ಮಧ್ಯ ಪ್ರಾಂತ್ಯ ಸರಕಾರ ನಿರ್ಧರಿಸಿದೆ.

ಜುಹೂರ್ ರಾಜ ನೂರಜಹಾರ್ ಇತ್ಯಾದಿ ನಟನಟಿಯರು ಪಾಕೀಸ್ತಾನದಲ್ಲಿ ಚಿತ್ರ ಕೈಗಾರಿಕೆಯನ್ನು ಪ್ರಾರಂಭಿಸಲಿದ್ದಾರೆ

ಭವತೀಭಿಕ್ಷಾಂದೇಹಿ

ನಾಳೇ ಪತ್ರಿಕೆಯಲ್ಲಿ—

—ಕಂಠೀ ಕಡತದಿಂದ

ಹೈದರಾಬಾದ ನಿಜಾಂ ಪ್ರಭು ಲ ಮುಸ್ಲಿಂ ಸಂಘದ ಬಂದಿ ?

ಹೈದರಾಬಾದಿನ ನಿಜಾಂ ಪ್ರಭುಗಳ ಪರಿಸ್ಥಿತಿ ಪ್ರಕ್ಷುಬ್ಧವಾಗಿದೆ ಇತ್ತೆಹಾದುಲ್ ಮುಸ್ಲಿಮೀನ್ ನಿಜಾಮರನ್ನು ಅಂಕೆಯ ಆಯಕಟ್ಟಿನಿಂದ ಬಂಧಿಸಿಬಿಟ್ಟಿದೆ ಸ್ವತಂತ್ರ ಘೋಷಿಸಿದ ನಿಜಾಂ ಪ್ರಭುಗಳೇ ಸ್ವ ಸ್ವತಂತ್ರರಹಿತರಾಗಿಬಿಟ್ಟಿದ್ದಾರೆ

ರಾಜನಿರ್ಮಾಣಕರಂತೆ ಇತ್ತೆಹಾದುಲ್ ಮುಸ್ಲಿಮೀನ್ ನಿಜಾಂರವರನ್ನು ಭಯಭೀತಿಯಲ್ಲಿಟ್ಟಿದೆ ಮುಸ್ಲಿಮೀನ್ ಸಂಘದ ಮಾತನ್ನು ತಿರಸ್ಕರಿಸಿದರೆ ನಿಜಾಂ ಪದಚ್ಯುತರಾಗುವರೆಂದು ಬೆದರಿಸಿದೆಯಂತೆ !

ನೇರ ಕಾರ್ಯಾಚರಣೆ ವಿರುದ್ಧ ಬಂದರೆ ರಾಷ್ಟ್ರೀಯ ಮುಸ್ಲಿಂರನ್ನು ಗುಂಡಿನ ಬಾಯಿಗೆ ಕಟ್ಟುವರಂತೆ !

ಹಿಂದೂಗಳನ್ನು ಕಾಡಿಸುವುದೇ ನೇರಕಾರ್ಯಾಚರಣೆಯು ! ಪ್ರಾಧಾನ್ಯ ನೀಡಿಯೂಬಹುದೆಂದೂ ಊಹಿಸಬಹುದಾಗಿದೆ

‡ ಸ್ವತಂತ್ರ ಪಟಾಣಿ ಸ್ಥಾನ ಚಳುವಳಿ ಮುಟ್ಟಹಾಕಲು ಪಾಕೀಸ್ತಾನ ಕಾಶ್ಮೀರ ಆಕ್ರಮಣ ಆರಂಭಿಸಿತು

‡ ಪಾಕೀಸ್ತಾನ ಪಾಪದ ಅಗಿದೆ ಬ್ರಿಟಿಷರಂತೆ ಅಂಜವೀಮುಲು ಯೋಗ್ಯತೆ ಇಲ್ಲ ವಿರೋಧತೆ ಹೊಂದಬಾರದು ಎಂದು ಕಾಶ್ಮೀರ ಆಕ್ರಮಣಕ್ಕೆ ಪಾಕೀಸ್ತಾನ ಪ್ರೇರೇಪಿಸಿತು

† ಪಾಕೀಸ್ತಾನವಿಷ್ಟು ಅರಿಯಲಿ ಕಾಶ್ಮೀರ ಕೊನೆರಕ್ತದ ವರೆಗೂ ಹೋರಾಟ ಹೂಡುವುದು

† ಪಾಕೀಸ್ತಾನ ಕದನ ಇಚ್ಛಿಸಿದರೆ ಕಾಶ್ಮೀರದಲ್ಲಿಯೆ ಪಾಕೀಸ್ತಾನ ಗೋರಿ ಶತಸ್ಸಿದ್ಧ

— ಕಾಶ್ಮೀರ ಸಿಂಹ ಷೇಕ್ ಅಬ್ದುಲ್ಲ ಘರ್ಜಿಸಿದ್ದಾರೆ

ಬೆಲ್ಜ್ರೇಡ್ ನ 1— ನ್ಯಾಯಾರ್ಥ ಬೈವರ್ಸ್ ಬಾತ್ಕೀದಾರ ತವ ವಿ || ಬ್ರೈಡಾಲರು ಮತ್ತು ಅವರ ಪತ್ನಿಯವರು 24 ಗಂಟೆಗಳೊಳಗೆ ಜುಗೋಸ್ಲೋವಿಯ ಬಿಟ್ಟು ಹೊಂಡಬೇಕೆಂದು ಮಂತ್ರಿಮಂಡಲ ಆಜ್ಞೆಮಾಡಿದ್ದೆ ಅವರ ಲೇಖನಗಳೇ ಈ ಗಡಿಪಾರು ಆಜ್ಞೆಗೆ ಕಾರಣವಂತೆ.

ಪಾಕಿಸ್ತಾನಕ್ಕಿಂತ ಮರಣ ವಾಸಿ

ಮುಸ್ಲಿಂ ಸ್ತ್ರೀಯೋರ್ವಳು ಪಾಕಿಸ್ತಾನದಲ್ಲಿ ಹೋಗಿ ನೆಲಸುವುದಕ್ಕಿಂತ ಮರಣ ವಾಸಿ ಎಂದು ಅದನ್ನು ಮುದ್ದಿಸಿದ ಕೆರ್ಣಕಠೋರ ವಾರ್ತೆ ' ಬಾಂಬೆ ಕ್ರಾನಿಕಲ್ ' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅವಳ ಗಂಡ ಔರ್ವ ಕಾರ್ಕಸ್ಟೇಬಲ್. ಆತ ಪಾಕಿಸ್ತಾನದಲ್ಲಿ ಹೋಗಿ ನೆಲಸುವ ಮನೋಗತವನ್ನು ವ್ಯಕ್ತಪಡಿಸಿದ. ಆದರೆ ಅವನ ಪತ್ನಿಗೆ, ತನ್ನ ಮಮತೆಯ ತಾಯ್ನೆಲವನ್ನು ಬಿಟ್ಟು ಹೋಗುವ ಮನಸ್ಸಿರಲಿಲ್ಲ. ಆಕೆಯ ವಿರೋಧವನ್ನು ಅವಳ ಪತಿ ಮನ್ನಿಸಲಿಲ್ಲ ಆದೊಂದು ದಿನ ಬೆಳಿಗ್ಗೆ ತನ್ನ ಪತಿಯು ಪಾಸಿಸುವ ಪೋಲೀಸ್ ಲೈನಿನಲ್ಲೇ ಆಕೆ ಕುತ್ತಿಗೆಗೆ ಹಗ್ಗ ಹಾಕಿ ಆತ್ಮಹತ್ಯೆ ಮಾಡಿಕೊಂಡ ದೃಶ್ಯ ಕಂಡುಬಂತು.

ಸಿಂಧ್ ಕ್ರೈಸ್ತರು ಭಾರತಕ್ಕೆ

ಸವಾಬ್ ಷಾದಿಂದ (ಸಿಂಧ್ ಪ್ರಾಂತ್ಯದಲ್ಲಿ) ಸುಮಾರು ಸಾವಿರ ಮಂದಿ ಕ್ರೈಸ್ತರು ಮನೆಮಾರುಗಳನ್ನು ತೊರೆದು ಭಾರತ ಯೂನಿಯನ್ನಿನಲ್ಲಿರುವ ಬೇರೆ ಬೇರೆ ಸ್ಥಳಗಳಿಗೆ ಹೋಗಿರುವರು. ಬೆಂಗಳೂರಿನ ಬಿಷಪರು ಬೆಂಗಳೂರಿನಲ್ಲಿ ಇತ್ತೀಚೆಗೆ ಒಂದು ಕ್ರೈಸ್ತ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುವಾಗ ಈ ವಿಷಯ ತಿಳಿಯಪಡಿಸಿದರು. ಪಾಕೀಸ್ತಾನದಲ್ಲಿ ಚಿತ್ರ ಹಿಂಸೆ ಅನುಭವಿಸಿ ಬೇಕಾಬೇಕಾದ ಬಿಷರಿಯರು ಮತ್ತು ಕ್ರೈಸ್ತರು ಈ ಧೋರಣೆ ಪಸಂದು ಮಾಡಿರುವ ವಿಷಯ ತಿಳಿಸಿದ್ದಾರೆ.

ಚಾರ್ಲಿ ಜುನಘಾಡೆ ನವಾಬರ ಸೆಕ್ರೆಟರಿ

ಪ್ರಸಿದ್ಧ ಏನೋದ ನಟ ಚಾರ್ಲಿಯವರು ರಜತ ಪಟವನ್ನು ತ್ಯಜಿಸಿ ಜುನಾಗಡ ನವಾಬರ ಸೆಕ್ರಟರಿ ಪದವಿಯನ್ನು ಸ್ವೀಕರಿಸಿದ್ದಾರಾಗಿ ವಿಶ್ವಾಸನೀಯವಾಗಿ ತಿಳಿದುಬಂದಿದೆ. ಚಾರ್ಲಿ ಜುನಾಗಡದ ನಿವಾಸಿಯಾಗಿದ್ದನು. ಲಕ್ಷ್ಮಿ ಪ್ರೊಡಕ್ಷನ್ಸ್‌ದವರ 'ಕುಂವಾರ ಪತಿ' ಎಂಬ ಚಿತ್ರದಲ್ಲಿ ನಟಿಸುವದೆ ಕರಾರು ಮಾಡಿದ ಚಾರ್ಲಿಯು ಈಗ ನಟಿಸಲು ನಿರಾಕರಿಸಿದ್ದಾನೆ ಜುನಾಗಡದಿಂದ ಪರತಃ ಬರುವುದಿಲ್ಲವೆಂದೂ ತಿಳಿಸಿರುತ್ತಾನಂತೆ.

ಂ ಂ

ಶಿವಾಜಿ ಮಿತಾಯಿ ಬುಟ್ಟಿಯ ಪುನರಾಗಮನ

ಲಿಸ್ಬ್ ಹತ್ತಿರ ಒಂದು ರೊಟ್ಟಿಯ ಕಾರ್ಖಾನೆಯ ಬಾಗಿಲಲ್ಲಿ ಒಬ್ಬ ಹೆಂ [illegible] ಳಗೆ ತನ್ನನ್ನು ಬಿಟ್ಟುಹೋಗಿರುವ ಗಂಡನಿದಾನೆಂದೂ, ಅವನ ಪೀಲೆ ಸೇಡ್ಮತೀರಿಸಿಕೊಳ್ಳುವೆನೆಂದೂ ಜನರಿಗೆ ಹೇಳಿದಳು. ಸಂಜೆಗತ್ತಲೆಗೆ ಒಳಗೆ ಒಳಗಿನ ಜನರೆಲ್ಲ ಒಬ್ಬೊಬ್ಬರೇ ಹೊರಬಿದ್ದು ಹೋದರು ರೊಟ್ಟಿ ಬುಟ್ಟಿಗಳೂ ಪೆಟ್ಟಿಗೆಗಳೂ ಹೋದವು ಗಂಡ ಮಾತ್ರ ಜೊರಗೆ ಬರಲೇ ಇಲ್ಲ. ಪಾಪ ಗಂಡನು ಒಂದು ರೊಟ್ಟಿ ಬುಟ್ಟಿಯಲ್ಲಿ ಕುಳಿತು ವಾರಾಗಿಹೋಗಿ ಹೆಂಡತಿಗೆ ಮುಂಕುಬೂದಿ ಹಚ್ಚಿಬಿಟ್ಟ (ಲೊ)

ಂ ಂ

ಶ್ರೀ ಧನ್ವಂತರಿ ಜಯಂತ್ಯುತ್ಸವ

ಮೈಸೂರು ಆಯುರ್ವೇದ ವೈದ್ಯ ಸಂಘದವರು ಶ್ರೀವಾಣಿವಿಲಾಸಪುರಂ ಸಂಸ್ಕೃತ ಪಾಠಶಾಲೆಯಲ್ಲಿ ತಾ 10 ಸೋಮವಾರ ಸಾಯಂಕಾಲ ಶ್ರೀ ಧನ್ವಂತರಿ ಜಯಂತ್ಯುತ್ಸವವನ್ನು ನೆರವೇರಿಸುವರು

Woodlands

ಅಮೋಘ 2 ನೇ ವಾರ

ಅಶೋಕಕುಮಾರ್
ವೀರಾ, ಹ್ಯಾರೊ, ಪಾತ್ರವಹಿಸಿರುವ

ಷಿಕಾರಿ

(ಅಮೋಘ ಹಿಂದಿ ಚಿತ್ರ)
ಪ್ರತಿದಿನ 3 ಆಟಗಳು

At Opera
4 th Glorious Week
MAD-MAN

.... with —

N.S.Krishnan, T A Maduram

For Quality Printing
L. N. Press
Sriramp st. MYSORE

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ವಾರ್ಷಿಕ ಚಂದ ಪಂಸ್ಥಳಕ್ಕೆ
ಅಂಚೆವೆಚ್ಚ ಸೇರಿ ರೂ. 9.
ಸೋವಾವಾರ ಸಂಚಿಕೆ ಮಾತ್ರ
ವಾರ್ಷಿಕಚಂದಾ
ಪಂಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12--0

Save the Cow
ಗೋ ವಧೆ ನಿಲ್ಲಲಿ

Edited, Printed and Publishe dby M. S Krishna Rao at the Satyavadi Press Chamaarja Agahar Myrsore.

Woodlands

Morning Shows at 10-30
From 7—11—47 For 4 days

God is My Co-Pilot

— starring —

Dennis Morgan, Dane Clark
Raymond Massey, Alen Hale

ಗ್ರೈಪ್ ಸಿರಪ್

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಔಷಧಿ. ಗ್ರೈಪ್ ಸಿರಪ್ ರುಚಿ ಸಿಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಪರಿಚಿತ್ತಿನ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅತ್ಯವಶ್ಯಕ

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.
Malleswaram P. O. [illegible]

ಶ್ರೀ 'ಓಂ' ಗುರುತಿನ
ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೈಯಿಂದ ಆರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸಿ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತು ಶುಭಕಾರ್ಯ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡಶಕ್ತವಾದುದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್
(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

SHAKTI SUDHA

A Superb TONIC